ಯೋಜನೆಗಳಿಂದ ಸಗಟು ನೀರು ಪೂರೈಕೆಯನ್ನು ಮಂಡಲಿಯು ನಿರ್ವಹಿಸುತ್ತಿದ್ದು ಈ ನಿರ್ವಹಣೆಗೆ 2001-02ನೇ ಸಾಲಿನಲ್ಲಿ ಡಿಸೆಂಬರ್ 2001ರ ಅಂತ್ಯದವರೆಗೆ ಒಟ್ಟು ರೂ.146.87 ಲಕ್ಷ ಖರ್ಚು ಮಾಡಲಾಗಿದೆ(ವಿದ್ಯುತ್ ಮೊತ್ತ ಹೊರತುಪಡಿಸಿ). ಹುಬ್ಬಳ್ಳಿ-ಧಾರವಾಡದಲ್ಲಿ ಕೈಗೊಂಡಿರುವ ರೂ.44.48 ಕೋಟಿ ಮೊತ್ತದ ತುರ್ತು ಅಭಿವೃದ್ಧಿ ನೀರು ಸರಬರಾಜು ಯೋಜನೆಗೆ ಡಿಸೆಂಬರ್ 2001ರ ಅಂತ್ಯದವರೆಗೆ ಒಟ್ಟು ರೂ.1539.00 ಲಕ್ಷಗಳಷ್ಟು ಆರ್ಥಿಕ ಪ್ರಗತಿ ಸಾಧಿಸಲಾಗಿದೆ. ಹಾಗೂ ರೂ.1029.00 ಲಕ್ಷ ಖರ್ಚು ಮಾಡಲಾಗಿದೆ.

2. ಮಲಪ್ರಭಾ ಯೋಜನೆಯ ಕೊಳವೆ ದುರಸ್ತಿಗೆ ರೂ.10.59 ಲಕ್ಷಗಳು ಹಾಗೂ ನೀರಸಾಗರ ಯೋಜನೆಯ ಕೊಳವೆ ಮಾರ್ಗದ ದುರಸ್ತಿಗೆ ರೂ.1.82 ಲಕ್ಷಗಳನ್ನು ಖರ್ಚು ಮಾಡಲಾಗಿದೆ. ವಿದ್ಯುತ್ ಸರಬರಾಜು ಸುಧಾರಣೆಗಾಗಿ ತಾವಿಹಾಳದಿಂದ ದುಮ್ಮವಾಡವರೆಗೆ ಸ್ವತಂತ್ರ 33 ಕೆ.ವಿ. ಮೇಲ್ಮಟ್ಟದ ವಿದ್ಯುತ್ ಮಾರ್ಗವನ್ನು ಎಳೆಯಲಾಗಿದ್ದು ರೂ.65.68 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

3. ಮಲಪ್ರಭಾ ಯೋಜನೆ ಅಡಿ ಸವದತ್ತಿಯಿಂದ ಅಮ್ಮಿನ ಬಾವಿಯವರೆಗೆ ಅಳವಡಿಸಿರುವ 26.59 ಕಿ.ಮೀ. ಉದ್ದದ 900 ಮಿ.ಮೀ. ವ್ಯಾಸದ ಪಿ.ಎಸ್.ಸಿ. ಕೊಳವೆ ಮಾರ್ಗವನ್ನು 1983ರಲ್ಲಿ ಅಳವಡಿಸಲಾಗಿದ್ದು ಈ ಕೊಳವೆ ಮಾರ್ಗ ಬಹುತೇಕ ಕಪ್ಪು ಮಣ್ಣು ಕೂಡಿರುವ ಪ್ರದೇಶದಲ್ಲಿ ಅಳವಡಿಸಲಾಗಿದ್ದು ಪದೇ ಪದೇ ವಿದ್ಯುತ್ ಸರಬರಾಜಿನಲ್ಲಿ ಉಂಟಾಗುವ ಅಡೆತಡೆಯಿಂದ ಕೊಳವೆ ಮಾರ್ಗದಲ್ಲಿ ಏರಿಳಿತ ಉಂಟಾಗಿ ಕೊಳವೆ ಜೋಡಣೆಗಳಲ್ಲಿ ಸೋರುವಿಕೆ ಕಾಣಿಸಿಕೊಳ್ಳುತ್ತದೆ. ಈ ಮಾರ್ಗದಲ್ಲಿನ ಅತಿ ಹೆಚ್ಚು ಸೋರಿಕೆ ಜಾಗವನ್ನು ಗುರುತಿಸಿ ಸೋರಿಕೆಯನ್ನು ತಡೆಗಟ್ಟಲಾಗಿದೆ. ಹುಬ್ಬಳ್ಳಿ ಧಾರವಾಡ ಅವಳಿ ನಗರಕ್ಕೆ ಮಲಪ್ರಭಾ ಯೋಜನೆಯಿಂದ ಹಾಗೂ ನೀರಸಾಗರ ಯೋಜನೆಯಿಂದ ಕ್ರಮವಾಗಿ 43.15 ದಶಲಕ್ಷ ಲೀಟರ್ ಮತ್ತು 40.86 ದಶಲಕ್ಷ ಲೀಟರ್ ಹೀಗೆ ಒಟ್ಟು 84.01 ದಶಲಕ್ಷ ಲೀಟರ್ ನೀರನ್ನು ಸಾಧಾರಣವಾಗಿ ಸರಬರಾಜು ಮಾಡಲಾಗುತ್ತಿತ್ತು. ಆದರೆ 2001ರ ಮಳೆಗಾಲದಲ್ಲಿ ಸಾಕಷ್ಟು ಮಳೆ ಬಾರದ ಕಾರಣ ಎರಡು ಮೂಲಗಳ ಜಲಾಶಯಗಳಲ್ಲಿ ನೀರು ಶೇಖರಣೆ ಇಲ್ಲದ ಕಾರಣ ಎರಡು ಜಲ ಮೂಲಗಳಿಂದ ಒಟ್ಟು 54.48 ದಶಲಕ್ಷ ಲೀಟರ್ ನೀರನ್ನು ಪ್ರಸ್ತುತ ಹಾಲಿ ಸರಬರಾಜು ಮಾಡಲಾಗುತ್ತಿದ್ದು ಹಾಲಿ ಜನಸಂಖ್ಯೆಗೆ ಪ್ರತಿದಿನ ಪ್ರತಿಯೊಬ್ಬರಿಗೆ 68 ಲೀಟರ್ ನೀರನ್ನು ಸರಬರಾಜು ಮಾಡಬಹುದಾಗಿದೆ. ಆದರೆ ಹುಬ್ಬಳ್ಳಿ-ಧಾರವಾಡ ಅವಳಿ ಪಟ್ಟಣದ ಹೊಸ ಬಡಾವಣೆಗಳಲ್ಲಿ ವಿತರಣಾ ಕೊಳವೆ ಹಾಗೂ ಜಲ ಸಂಗ್ರಹಾಗಾರಗಳು ಇಲ್ಲದೆ ಇರುವ ಕಾರಣ ಕೆಲವು ಪ್ರದೇಶಗಳಲ್ಲಿ ವಿತರಣೆಯಲ್ಲಿ ತೊಂದರೆ ಉಂಟಾಗುತ್ತಿದೆ.

4. 1. ಹುಬ್ಬಳ್ಳಿ-ಧಾರವಾಡ ತುರ್ತು ನೀರು ಸರಬರಾಜು ಅಭಿವೃದ್ಧಿ ಯೋಜನೆಗೆ ರೂ.44.48 ಕೋಟಿಗಳ ಅಂದಾಜಿಗೆ ದಿನಾಂಕ 22.8.2000ರಲ್ಲಿ ಅನುಮೋದನೆ ನೀಡಿದ್ದು

ಈ ಯೋಜನೆಯಡಿ ಸುಮಾರು 32.26 ಕಿ.ಮೀ. ಉದ್ದದ ಎಂ.ಎಸ್. ಕೊಳವೆಯನ್ನು ಅಳವಡಿಸಲು ಹಾಗೂ 5 ಮೇಲ್ಮಟ್ಟದ ಜಲ ಸಂಗ್ರಹಾಗಾರ ಹಾಗೂ 1 ನೆಲಮಟ್ಟದ ಜಲಸಂಗ್ರಹಾಗಾರವನ್ನು ಪ್ರಮುಖವಾಗಿ ನಿರ್ಮಿಸಲು ಹಾಗೂ ವಿದ್ಯುತ್ ಯಂತ್ರ ಅಳವಡಿಸಲು ಅವಕಾಶ ಮಾಡಲಾಗಿದೆ.

2. 2001ರ ಮಳೆಗಾಲದಲ್ಲಿ ಹುಬ್ಬಳ್ಳಿ-ಧಾರವಾಡ ನಗರಕ್ಕೆ ಸರಿಯಾಗಿ ಮಳೆ ಬಾರದ ಕಾರಣ ನೀರಿನ ಕೊರತೆಯನ್ನು ನೀಗಿಸಲು ಒಟ್ಟು 102 ಹೊಸ ಕೊಳವೆ ಬಾವಿಗಳನ್ನು ಕೊರೆಯಲು ರೂ.112 ಲಕ್ಷದ ಅಂದಾಜನ್ನು ತಯಾರಿಸಲಾಗಿದೆ.

3. ಒಣಗುತ್ತಿರುವ ನೀರಾಗರ ಕೆರೆಯಿಂದ ಹೂಳೆತ್ತುವ ಕಾಮಗಾರಿಗೆ ಅಂದಾಜನ್ನು ರೂ.4.00 ಕೋಟಿಗಳಿಗೆ ತಯಾರಿಸಲಾಗಿದೆ.

5. ಹುಬ್ಬಳ್ಳಿ-ಧಾರವಾಡ ತುರ್ತು ನೀರು ಸರಬರಾಜು ಅಭಿವೃದ್ಧಿ ಯೋಜನೆಯ ಕಾಮಗಾರಿಗೆ ಡಿಸೆಂಬರ್ 2001ರ ಅಂತ್ಯದವರೆಗೆ ಒಟ್ಟು ರೂ.10.90 ಕೋಟಿಗಳನ್ನು ಎಲ್ ಅಂಡ್ ಟಿ ಬೆಂಗಳೂರು ಗುತ್ತಿಗೆದಾರರಿಗೆ ಬಿಡುಗಡೆ ಮಾಡಲಾಗಿದೆ.

6. ಈ ಯೋಜನೆಗೆ ಸಾಲ ಪಡೆಯಲು ರೂ.29.65 ಕೋಟಿಗಳಿಗೆ ಗ್ಯಾರಂಟಿಯನ್ನು ಸರ್ಕಾರ ನೀಡಿದೆ.

ರಾಜ್ಯದಲ್ಲಿ ಬಾಕಿ ಇರುವ ಕ್ರಿಮಿನಲ್ ಮೊಕದ್ದಮೆಗಳ ವಿವರ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 945(1499)

ಸದಸ್ಯರ ಹೆಸರು: ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮೀಣ)

ಪ್ರಶ್ನೆ

ಅ) ರಾಜ್ಯದ ಅನೇಕ ನ್ಯಾಯಾಲಯಗಳಲ್ಲಿ ಕ್ರಿಮಿನಲ್ ಮೊಕದ್ದಮೆಗಳು ಅನೇಕ ವರ್ಷಗಳಿಂದ ಇತ್ಯರ್ಥವಾಗದೇ ಬಾಕಿ ಉಳಿದಿರುವುದು ನಿಜವೇ? ಹಾಗಿದ್ದಲ್ಲಿ ಒಟ್ಟು ಎಷ್ಟು ಮೊಕದ್ದಮೆಗಳು ಬಾಕಿ ಇವೆ?

ಆ) ಈ ಮೊಕದ್ದಮೆಗಳ ವಿಲೇವಾರಿಗಾಗಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಇ) ಇದಕ್ಕಾಗಿ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸುವ ಉದ್ದೇಶವನ್ನು ಸರ್ಕಾರ ಹೊಂದಿರುವೆಯೇ? ಹಾಗಿದ್ದಲ್ಲಿ ಎಷ್ಟು ನ್ಯಾಯಾಲಯಗಳನ್ನು ಸ್ಥಾಪಿಸಲಾಗುವುದು?